ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಹೊನ್ನಾವರ.

ಸಿಸಿ ನಂಃ 2563/2022

ಪಿ ಡಬ್ಲುಃ 02

ಸಿ ಡಬ್ಲುಃ 04

| | |
|---|---|
| ಸಾಕ್ಷಿದಾರರ ಹೆಸರು | ಮಿಥಿನಾ ಆರ್ ನಾಯಕ |
| ಗಂಡನ ಹೆಸರು | ಮಂಜುನಾಥ ನಾಯಕ |
| ವಯಸ್ಸು | 43 |
| ಉದ್ಯೋಗ | ಪಿ ಡಿ ಓ ಹಡಿನಬಾಳ ಗ್ರಾಮ ಪಂಚಾಯತ್ |
| ವಾಸ್ತವ್ಯ | ಹಡಿನಬಾಳ |

ಸಾಕ್ಷಿಯನ್ನು ದಿನಾಂಕಃ 08-11-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಆರೋಪಿಯ ಪರಿಚಯ ಇದೆ. ಅವರು ಹಡಿನಬಾಳ ಗ್ರಾಮ ಪಂಚಾಯತಿಯ ಸದಸ್ಯರಾಗಿರುತ್ತಾರೆ. ದಿಃ 28.01.2022 ರಂದು ಹಡಿನಬಾಳ ಗ್ರಾಮ ಪಂಚಾಯತಿಯಲ್ಲಿ ಸಾಮಾಜಿಕ ನ್ಯಾಯ ಸಮೀತಿಯ ಸಭೆ ಇದ್ದು ಅದು ಮನೆಗಳ ಹಂಚಿಕೆ ವಿಚಾರವಾಗಿ ನಡೆದ ಸಭೆಯಾಗಿತ್ತು. ಸ್ದಿ ದಿನ ಆರೋಪಿ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾಗಿದ್ದರು. ಆಗ ಎಲ್ಲ ಸದಸ್ಯರ ಮಧ್ಯೆ ವಾದ ಮತ್ತು ಚರ್ಚೆಗಳು ನಡೆಯುತ್ತಿದ್ದವು. ಆಗ ಚಾಸಾ 1 ರವರು ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದರು. ಆಗ ಚಾಸಾ 1 ರವರು ತಮ್ಮ ವಾರ್ಡನಲ್ಲಿ ಇರುವ ಮನೆಗಳ ಹಂಚಿಕೆ ಬಗ್ಗೆ ಮಾತನಾಡುತ್ತಿದ್ದರು. ಅವರು ಹೆಚ್ಚಿನ ಸೌಲಭ್ಯವನ್ನು ಕೇಳುತ್ತಿದ್ದರು. ಆಗ ಆರೋಪಿ ಚಾಸಾ 1 ರವರನ್ನು ಕುರಿತು ನೀವು ಹೇಳಿದ ಹಾಗೆ ಕೆಲಸ ಮಾಡಲು ಆಗುವುದಿಲ್ಲ, ಎಲ್ಲರಿಗೂ ಸಮಾನವಾಗಿ ಹಂಚಿಕೆ ಮಾಡಬೇಕು ಎಂದು ಹೇಳಿರುತ್ತಾರೆ. ಎಲ್ಲದ್ದಕ್ಕೂ ಚರ್ಚೆ ಮಾಡಿ ವಾದ ಮಾಡಿದರೆ ಆಗುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ಆರೋಪಿ ಚಾಸಾ 1 ರವರನ್ನು ಕುರಿತು ನೀವು ಮೋಸ ಮತ್ತು ನಂಬಿಕೆದ್ರೋಹ ಮಾಡುತ್ತಿದ್ದೀರಿ ಮತ್ತು ನೀವು ಸುಳ್ಳು ವಾದ ಮಾಡುತ್ತಿದ್ದೀರಿ ಎಂದು ಹೇಳಿರುತ್ತಾರೆ. ನಂತರ ಆಣೆ ಪ್ರಮಾಣದ ವಿಚಾರವಾಗಿ ಮಾತುಕತೆ ಆಗಿರುತ್ತದೆ. ನಂತರ ಆರೋಪಿ ನೀವು ಇದೇ ರೀತಿ ಮಾಡಿದರೆ ನಿಮಗೆ ಏನು ಮಾಡಬೇಕು ಎಂದು ನನಗೆ ಗೊತ್ತು ಎಂದು ಹೇಳಿರುತ್ತಾರೆ. ನಂತರ ಅವರನ್ನು ಸಂಭಾಳಿಸಲು ನೋಡಿದ್ದು ಆರೋಪಿ, ಚಾಸಾ 1 ಮತ್ತು ಎಲ್ಲಾ ಸದಸ್ಯರೂ ಅಲ್ಲಿಂದ ಎದ್ದು ಹೋಗಿರುತ್ತಾರೆ. ಆಗ ಸಮಯ ಸಂಜೆ 4 ಗಂಟೆಯಾಗಿತ್ತು. ನಾನು ಪೋಲಿಸರಿಗೆ ಯಾವದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ಸ್ದ್ರಿ ದಿನ ಸ್ದ್ರಿ ಸಭೆಯಲ್ಲಿ ಚಾಸಾ 5, ಆರೋಪಿ, ಚಾಸಾ 7, ಚಾಸಾ 6, ಚಾಸಾ 8, ಚಾಸಾ 1 ರವರು ಹಾಜರಿದ್ದರು ಎಂದರೆ ಸರಿ. ಆ ಚರ್ಚೆ ಸಮಯದಲ್ಲಿ ಆರೋಪಿ ಮತ್ತು ಚಾಸಾ 1 ರವರ ನಡುವೆ ಮಾತುಕತೆ ಆಗಿರುತ್ತದೆ ಎಂದರೆ ಸರಿ. ಆ ಸಮಯದಲ್ಲಿ ಆರೋಪಿ ಚಾಸಾ 1 ರವರನ್ನು ಏಕವಚನದಲ್ಲಿ ನಿಂದಿಸಿ ಆರೋಪಿ ಅವಾಚ್ಯವಾಗಿ ಬೈದು ನೀನು ಏನು ಬೇಕಾದರೂ ಮಾಡು ತನಗೆ ನಿನ್ನ ಹತ್ತಿರ ಏನು ಮಾಡಕ್ಕೂ ಆಗುವುದಿಲ್ಲ, ನಿನಗೆ ಮಾತ್ರ ತಾನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರು ನಮ್ಮ ಪಂಚಾಯತಿಯ ಮುಂದಿನವರೆಗೆ ಹೊರಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ಚಾಸಾ 1 ರವರನ್ನು ಅಡ್ಡಗಟ್ಟಿ ತಡೆದು ಏ ಬೋಸುಡಿ ರಂಡೆ ಪಂಚಾಯತಿಯ ಒಳಗಡೆ ಎಷ್ಟೆಲ್ಲಾ ಹಾರಾಡುತ್ತೀಯಾ ನೀನು ಒಬ್ಬಳೆ ತಿರುಗಾಡುತ್ತೀ, ಆಗ ಸಿಗು ನಿನ್ನ ಯಾರು ಕಾಪಾಡುತ್ತಾರೆ ನೋಡುತ್ತೇನೆ, ನಿನಗೆ ಇಷ್ಟಕ್ಕೆ ಬಿಡುವುದಿಲ್ಲ, ಇನ್ನೊಂದು ದಿನ ಇದೇ ಪಂಚಾಯತಿಯ ಎದುರಿಗೆ ಕೊಂದು ಹಾಕುತ್ತೇನೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಬೈಯ್ಯುತ್ತಿರುವಾಗ ನಾನು ಹೋಗಿ ಸ್ದ್ರಿ ಜಗಳ ಬಿಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕುರಿತು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ 5 ಎಂದು, ಭಾಗವನ್ನು ನಿಪಿ 5 ಎ ಎಂದು ಗುರುತಿಸಲಾಯಿತು. ಎಲ್ಲಾ ಸಂಗತಿಗಳು ನಿಜವಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್. ಜಿ. ಸಿ. ವಕೀಲರಿಂದಃ**

ಸ್ದ್ರಿ ವರ್ಷ ಒಟ್ಟೂ 30 ಮನೆಗಳು ಮಂಜೂರಾತಿಗಾಗಿ ಬಂದಿದ್ದವು. ಅದಕ್ಕೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಒಬ್ಬೊಬ್ಬರಿಗೆ ಮೂರು ಮನೆಗಳನ್ನು ಮಾತ್ರ ಕೊಡಲಾಗುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಚಾಸಾ 1 ರವರು ತನಗೆ ಒಂದು ಮನೆ ಹೆಚ್ಚಿಗೆ ಬೇಕು ಎಂದು ಕೇಳಿರುತ್ತಾರೆ ಎಂದರೆ ಸರಿ. ಅದಕ್ಕೆ ಚಾಸಾ 1 ಸಿಟ್ಟಾಗಿದ್ದರು ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನೊಟ್ಟಿಗೆ ನ್ಯಾಯಾಲಯಕ್ಕೆ ಈ ದಿನ ಬಂದಿರುವುದಿಲ್ಲ, ಆದರೆ ನ್ಯಾಯಾಲಯದಲ್ಲಿ ಅವರು ಭೇಟಿಯಾಗಿರುತ್ತಾರೆ. ಪಂಚಾಯತಿ ಮೀಟಿಂಗಿನಲ್ಲಿ ಚರ್ಚೆ ಆಗುವುದು ಸಾಮಾನ್ಯ ಎಂದರೆ ಸರಿ. ಸ್ದ್ರಿ ಚರ್ಚೆ, ವಾದ ಒಂದು ಹಂತಕ್ಕೆ ವಿಕೋಪಕ್ಕೆ ಹೋಗಿತ್ತು. ನಮ್ಮ ಪಂಚಾಯತಿ ಮೀಟಿಂಗ್ ಹಾಲ್ ನಲ್ಲಿ ಸಿಸಿ ಕ್ಯಾಮರಾ ಇದೆ ಎಂದರೆ ಸರಿ. ಘಟನೆ ಚಿತ್ರೀಕರಣ ಆಗಿದೆ ಎಂದರೆ ಸರಿ . ಪೋಲಿಸರು ಸಿಸಿ ಟಿ ವಿ ಫೂಟೇಜ್ ಮತ್ತು ಪಂಚಾಯತಿ ಸದಸ್ಯರ ಬಗ್ಗೆ ಮಾಹಿತಿ ಕೇಳಿರುತ್ತಾರೆ. ಪೋಲಿಸರು ಸಿಸಿ ಟಿವಿ ಫೂಟೇಜ್ ಪಡೆದಿರುತ್ತಾರೆ. ಅದನ್ನು ನಾನು ದಿಃ 14.02.2022 ರಂದು ನೀಡಿರುತ್ತೇನೆ. ಆ ರೀತಿ ಪಡೆಯುವಾಗ ಪಂಚನಾಮೆ ಮಾಡಿರುವುದಿಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.